ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಬಡವರಿಗೆ ಅನ್ಯಾಯವಾಗಬಾರದು ಇದನ್ನು ನಾನು ಒಪ್ಪುತ್ತೇನೆ. ಇವರ ತಾಲ್ಲೂಕಿನಲ್ಲಿ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ನಡೆಯುತ್ತಿದೆ. ಇದು ಮಾನ್ಯ ಕೃಷ್ಣಮೂರ್ತಿಯವರ ಕ್ಷೇತ್ರಕ್ಕೆ ಹೋಗಿದೆ. ಮೊದಲೇ ಹೇಳಿದ್ದರೆ ಇಬ್ಬರ ಮಧ್ಯದಲ್ಲಿ ಮಾಡಿಸಬಹುದಾಗಿತ್ತು. ಸರ್ಕಾರದಿಂದ ಹಣ ಲಭ್ಯವಾದರೆ ಕ್ಷೇತ್ರಕ್ಕೆ ಒಂದು ಕೊಡುವುದಕ್ಕೆ ನಮ್ಮ ಅಭ್ಯಂತವೇನಿಲ್ಲ. ಹಣಕಾಸಿನ ಪರಿಸ್ಥಿತಿಯನ್ನು ನೋಡದೇ ನನಗೆ ಯಾವುದೂ ಭರವಸೆ ಕೊಡುವುದಕ್ಕಾಗುವುದಿಲ್ಲ. ಅಡ್ಜಿಷನ್ ಮಾಡುವ ಸಮಯದಲ್ಲಿ ಇಬ್ಬರ ಕ್ಷೇತ್ರಕ್ಕೂ ಸಮನಾಗಿ ಬೇಕಾದರೆ ಆ ವ್ಯವಸ್ಥೆಯನ್ನು ಮಾಡಬಹುದು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಕೊಡುವುದಕ್ಕಾಗದಿದ್ದರೆ ಒಂದು ಹಾಸ್ಟೆಲ್‌ನ್ನಾದರೂ ಕೊಡಿ ಎಂದು ನಾನು ಕೇಳಿದ್ದೇನೆ. ಹಾಸ್ಟೆಲ್ ಮಂಜೂರು ಮಾಡುವಂತೆ ನಾವು ಹೇಳಿದರೆ, ನನಗೆ ಬಹಳ ಅನುಕೂಲವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ತಮಗೆ ಯಾವ ಹಾಸ್ಟೆಲ್ ಬೇಕು ಎನ್ನುವುದು ನನಗೆ ಗೊತ್ತಿಲ್ಲ. ಅವಕಾಶ ಸಿಕ್ಕರೆ ನಾನು ತಮ್ಮ ಜೊತೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮೊರಾರ್ಜಿ ದೇಸಾಯಿಯವರ ಹೆಸರಿನಿಂದ ಪ್ರತಿಯೊಂದು ತಾಲ್ಲೂಕಿಗೆ ಒಂದು ವಸತಿ ಶಾಲೆ ಮಾಡಬೇಕೆಂದು ನಮ್ಮ ಸರ್ಕಾರ ಇದ್ದಾಗ ತೀರ್ಮಾನಿಸಿತ್ತು. ಹಿಂದುಳಿದಿರತಕ್ಕಂಥ ತಾಲ್ಲೂಕುಗಳಿಗೆ ಪ್ರತಿ ವರ್ಷ 5 ರಂತೆಯಾದರೂ ಕೊಡುತ್ತಾ ಹೋಗಬೇಕು. ಇದು 10-20 ವರ್ಷಕ್ಕೆ ಬೇಕಾದರೆ ಮುಗಿಯಲಿ. ಲಭ್ಯತೆ ಇಲ್ಲವೆಂದು ತಾವು ಹೇಳಿಕೊಂಡು ಹೋದರೆ, ಯಾವ ತಾಲ್ಲೂಕಿಗೆ ಇಲ್ಲ, ಅಲ್ಲಿ ವಂಚನೆಯಾಗಿ ಹೋಗುತ್ತದೆ. ಈ ವರ್ಷಕ್ಕೆ ಐದನ್ನಾದರೂ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರ ಸಲಹೆ ಸೂಕ್ತವಾಗಿದೆ. ನನಗೆ ಎಲ್ಲಾ ಜನರಿಗೆ ಕೊಡಬೇಕೆನ್ನುವ ಆಶೆ ಕೂಡ ಇದೆ. ಮಾನ್ಯ ಬೈರೇಗೌಡರ ಕ್ಷೇತ್ರದಲ್ಲಿ ಬುದ್ಧಿವಂತ ಮಕ್ಕಳು ಬೆಳೆದರೆ ಸಾಕಾಗುವುದಿಲ್ಲ. ಎಲ್ಲಾ ಕ್ಷೇತ್ರದಲ್ಲಿ ಬೆಳೆಯಬೇಕಾಗುತ್ತದೆ. ಆ ಸಲಹೆಯನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಬಸಾಗೌಡ ಎ. ಪಾಟೀಲ್: ದಾವಣಗೆರೆ ತಾಲ್ಲೂಕು ಭೌಗೋಳಿಕವಾಗಿ ಬಹಳ ದೊಡ್ಡದು. ಅಲ್ಲಿ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ಇರುವುದಿಲ್ಲ. ನಮ್ಮ ತಾಲ್ಲೂಕಿಗೆ ಒಂದು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಅವರ ಸಲಹೆ ಕೂಡ ನನ್ನ ಗಮನದಲ್ಲಿದೆ.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ,

I. 1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

1. ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು, 1992ಕ್ಕೆ ತಿದ್ದುಪಡಿ ಮಾಡಿ ದಿನಾಂಕ 17-01-2000 ದಂದು ಹೊರಡಿಸಲಾದ ಡಿಪಿಎಆರ್: 36: ಎಸ್ಆರ್ಡಿ: 99ನೇ ಸಂಖ್ಯೆಯ ಅಧಿಸೂಚನೆ;

1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 39ರ ಪ್ರಕರಣದ ಮೇರೆಗೆ:

2. ಪ್ರಾಣಿಗಳ ಆಹಾರ ಮತ್ತು ಆಹಾರ ಸರಬರಾಜಿನ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 16-12-2000 ದಂದು ಹೊರಡಿಸಲಾದ ಎಫ್ಡಿ: 298: ಸಿಎಸ್ಎಲ್: 2000ನೇ ಸಂಖ್ಯೆಯ ಅಧಿಸೂಚನೆ;

3. ದಿನಾಂಕ 06-02-2001ರ ಎಫ್ಡಿ: 287: ಸಿಎಸ್ಎಲ್: 99ನೇ ಸಂಖ್ಯೆಯ ಅಧಿಸೂಚನೆಗೆ ದಿನಾಂಕ 06-02-2001 ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 16-02-2001 ರಂದು ಹೊರಡಿಸಲಾದ ಎಫ್ಡಿ: 287: ಸಿಎಸ್ಎಲ್: 99ನೇ ಸಂಖ್ಯೆಯ ಅಧಿಸೂಚನೆ;

4. ದಿನಾಂಕ 02-05-2000 ದ ಎಫ್ಡಿ: 287: ಸಿಎಸ್ಎಲ್: 99ನೇ ಸಂಖ್ಯೆಯ ಅಧಿಸೂಚನೆಗೆ ತಕ್ಷಣದಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ: 15-03-2001 ರಂದು ಹೊರಡಿಸಲಾದ ಎಫ್ಡಿ: 287: ಸಿಎಸ್ಎಲ್: 99ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

II. ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಮಾನ್ಯ ಗೃಹ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಕಾಯ್ದೆ 20ರ ಪ್ರಕರಣದ ಮೇರೆಗೆ: ಬೆಂಗಳೂರು ಜಿಲ್ಲೆ, ಜಾಲಹಳ್ಳಿಯಲ್ಲಿರುವ ಭಾರತ್ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘದವರು ತಮ್ಮ ಸಭಾಂಗಣದಲ್ಲಿ ಕೆಲವು ಷರತ್ತಿಗನುಗುಣವಾಗಿ 35 ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿ ದಿನಾಂಕ 22-03-2001 ರಂದು ಹೊರಡಿಸಲಾದ ಹೆಚ್ಡಿ:65:ಸಿಎನ್ಎ: 2001ನೇ ಸಂಖ್ಯೆಯ ಆದೇಶವನ್ನು ಮಂಡಿಸುತ್ತೇವೆ.

III. ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆ 619(ಎ) ಪ್ರಕರಣ ಮೇರೆಗೆ:

ಕರ್ನಾಟಕ ನೀರಾವರಿ ನಿಗಮ ನಿಯಮಿತದ 1998-99ನೇ ಸಾಲಿನ ಮೊದಲನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

IV. ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ,

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 300(5)ರ ಪ್ರಕರಣದ ಮೇರೆಗೆ:

ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ

V. ಶ್ರೀ ಎಂ. ಧರ್ಮಸಿಂಗ್ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆ 619(ಎ) ಪ್ರಕರಣದ ಮೇರೆಗೆ:

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 1999-2000ನೇ ಸಾಲಿನ ಮೊದಲನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

VI. ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆ 619(ಎ) ಪ್ರಕರಣದ ಮೇರೆಗೆ:

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 1997-98 ಮತ್ತು 1998-99ನೇ ಸಾಲಿನ ವಾರ್ಷಿಕ ವರದಿ ಹಾಗೂ 1996-97 ಮತ್ತು 1997-98ನೇ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಎಲ್ಲಾ ಕಾಗದಪತ್ರಗಳನ್ನು ಮಂಡಿಸಲಾಯಿತು.

3. ವರದಿಯನ್ನೊಪ್ಪಿಸುವುದು

ಶ್ರೀ ವಸಂತ ಎ. ಸಾಲಿಯಾನ (ಕಾಪು): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮ ಸಮಿತಿಯ ಅಧ್ಯಕ್ಷನಾಗಿ ಕೃಷ್ಣಾಭಾಗ್ಯ ಜಲನಿಗಮದ 87ನೇ ವರದಿಯನ್ನು, ಕರ್ನಾಟಕ ವಿದ್ಯುತ್ ನಿಗಮದ 88ನೇ ವರದಿಯನ್ನು ಮತ್ತು ಕರ್ನಾಟಕ ಗೇರು ಅಭಿವೃದ್ಧಿ ನಿಗಮದ 89ನೇ ವರದಿಯನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.